ಮುಚ್ಚಿ ಮೊಮ್ಮಕ್ಳೂನ ಮಾತಾಡಿಸ್ತೀರ, ಎಂಗೂ ನಡ್ಲು ಮನೇಲಿ ಸೇಫ್ಟಿಯಾಗಿದಾರೆ ಅಂತಲ್ವ?

ಅಯ್ಯೋ ಇವ್ರ ಜಗ್ಳ ಮುಗಿಯಲ್ಲ ನೋಡಿ, ನಡ್ಲು ಮನೆ ಏನೇನೋ ಕ್ರಿಮಿನಲ್ ಬುದ್ದಿ ಓಡ್ಸಿ ಓಡ್ಸಿ ಯಾವಾಗ್ಲು ಎಲ್ಡು ಕಡೀಕು ಸಮಾಧಾನ ಮಾಡ್ಸದು. ಈಗ ಯಾಕೋ ಅದ್ರು ಬುಡುಕ್ಕೇ ಬಂದಿರಂಗೀತೆ. ಅದ್ಕೆ ಒಂಚೂರು ಜೋರಾದಂಗೀತೆ. ಎಲ್ರೂ ಇಲ್ಲೇ ನನ್ ಸುತ್ತ ಕುತ್ಕಂಡು ಮಾತಾಡ್ತವ್ರೆ. ನನ್ಗೆ ಈ ಕಟ್ಟೆ ಕಟ್ಟಿದ್ದು ನಡ್ಲು ಮನೆ ಅಂದ್ನಲ್ಲ, ಅವ್ರು ಮಾತ್ರ ಪೂಜೆ-ಗೀಜೆ ಅಂತ ಮಾಡರು. ಉಳ್ದೋರು ಕೈ ಮುಗ್ದು ಮರ ಸುತ್ತರು. ಅಂಗೆ ಸುತ್ತೀ ಸುತ್ತೀ ಏನಾರ ಒಳ್ಳೆದಾತು ಅಂದ್ರೆ ಜೋರಾಗಿ ಪೂಜೆ ಮಾಡರು, ಮೊನ್ನೆ ಒಗೆ ಆಕಿರು ಅಂದ್ನಲ್ಲ, ಅಂಗೇನಾರ ಮಾಡಿ ಓಗರು. ಅದ್ಬಿಟ್ರೆ ಇಂಗೆಲ್ಲಾ ಒಟ್ಟಿಗೆ ಬಂದಿದ್ನ ನೋಡ್ಲಿಲ್ಲಪ್ಪ. ಪರ್ವಾಗಿಲ್ಲ, ಈ ಸ್ಕೂಲು ಕಟ್ಸಕಾರ ಒಂದಾದ್ರಲ್ಲ ಸಾಕು.



ನೋಡಿ ಇವ್ರು ಕೂಟೆ ಇಷ್ಟು ವರ್ಷ ಬದ್ಕಿದ್ಕೆ ಒಂತರಾ ಪ್ರೀತಿನೇ ಬಂದೀತೆ ನನ್ಗೂ. ಇಂಗೆ ಒಟ್ಟಿಗೆ ನೋಡ್ತಿದ್ರೆ ಇನ್ನೊಂದ ನೂರ್ವರ್ಷ ಬದ್ಕನಾ ಅನ್ಸುತ್ತೆ. ಜೊತಿಗೆ ಈ ಸ್ಕೂಲು ಸ್ಪಾಟಾಗಿ ಮಕ್ಳು ಬಂದ್ಬಿಟ್ರೆ ಸಾಕು. ಸದ್ಯುಕ್ಕೆ ಆ ಒಸ ಜನ ಏನ ಮಾತಾಡ್ತಾವೆ ಕೇಳ್ಕಂಬಿಡಿ ಅಷ್ಟೆ, ನಾನಿನ್ನ ನಿಮ್ಗೆ ಯಾವ ಕತೇನೂ ಏಳಲ್ಲ, ಸ್ಕೂಲು ಆಗವರ್ಗ ಕಣ್ಮುಚ್ಕಂಡು ಅದ್ರು ಕನ್ಸು ಕಾಣ್ತೇನಿ. ಸ್ಕೂಲು ಒಂದ್ಸಾರಿ ಆದ್ರೆ ಮುಗೀತು, ಆ ಮಕ್ಳು ಜೊತೆಯಾಗ್ತೀನಿ. ನೀವೀಗ ನಡ್ಲು ಮನೇರ್ಗೆ ಆ ಒಸ ಜನ ಏನ ಏಳಕೆ ನೋಡ್ತವ್ರೆ ಕೇಳೀ ಕೇಳೀ.

ಹೊಸ ಜನ: ನೋಡಿ ನಿಮ್ಮ ವಾದ-ವಿವಾದ ಎಲ್ಲಾ ಮುಗ್ದು ಈಗ ಒಂದು ನಿರ್ಧಾರಕ್ಕೆ ಬಂದಿದ್ದೀರ... ಮತ್ತೆ ಜಗ್ಳ ಮಾಡ್ಕಬೇಡಿ, ಮುಂದಿನ ಕೆಲ್ಸ ಶುರು ಮಾಡ್ಬೋದ, ಏಳ್ಬಿಡಿ.

ಎಡ್ಗಡೆ ಮನೆ: ಮಾಡ್ಬಿಡಿ, ನಡ್ಲು ಮನೆ ಮಕ್ಳು ಜಾಸ್ತಿ ಇದಾವೆ ಅಂತ ಇಲ್ಲೂ ಲಾಭ ಮಾಡ್ಕಳಕೆ ನೋಡ್ತ ಕಳ್ಳ.

ಬಲ್ಗಡೆ ಮನೆ: ಊಂ! ಇಬ್ರು ಜಗ್ಳದಿಂದ ಯಾವಾಗ್ಲು ನಡ್ಲು ಮನೇನೆ ಅಲ್ವ ಮಜ ಮಾಡ್ತಿದ್ದು. ಈಗ್ಲು ಅಂಗೆಯ ನಾವು ನಮ್ ಜಾಗ್ದಲ್ಲಿ ನಮ್ನಮ್ಮ ದೇವ್ರಿಗೆ ಗುಡಿ ಕಟ್ಸನ ಅಂತ ಅನ್ಕಂಡ್ರೆ ಸ್ಕೂಲು ಕಟ್ಸಿ ಅಂದ.

ಹೊಸ ಜನ: ಅದ್ರಲ್ಲಿ ನಡ್ಲು ಮನೆಗೆ ಏನ್ ಸಿಗದು. ಎಲ್ರು ಮನೆ ಮಕ್ಳು ಅಲ್ಲೇ ಸ್ಕೂಲಿಗೆ ಓಗರಲ್ವ?

ಬಲ್ಗಡೆ ಮನೆ: ಊಂ! ಇದೇ ನಡ್ಲು ಮನೆ ಬುದ್ದಿ ನೋಡ್ರಿ, ನಮ್ ಮನೆಗೂಳಲ್ಲಿ ಎಲ್ಡೆಲ್ಡು ಮಕ್ಳವೆ, ಅವ್ನ ಮನೆ ತುಂಬಾ ಮಕ್ಳು. ಅವ್ರಿಗೆಲ್ಲಾ ಸ್ಕೂಲು ನಮ್ಜಾಗ್ದಲ್ಲಿ ಆಗುತ್ತಲ್ಲ.

ನಡ್ಲು ಮನೆ: ಆ ಮಕ್ಳಲ್ಲಿ ನಿಮ್ಮವೇ ಜಾಸ್ತಿ ಇದಾವೆ. ನಿಮ್ಮ ಎಣ್ಣು-ಗಂಡು ಸೇರ್ಕಂಡು ಆಗಿರ ಸಂಸಾರ್ವೇ ಸಾಗರದಷ್ಟು ಈತೆ.

ಎಲ್ರೂ ಮನೆ: ನೋಡ್ರಿ ನೋಡ್ರಿ... ಇಂಗೆ ಏಳ್ಕಂಡು ಏಳ್ಕಂಡು, ಅವೆಲ್ಡು ಮಕ್ಳುನ್ನ ಮುಂದಿಟ್ಕಂಡು ಇಷ್ಟು ಆಟ ಆಡ್ತಿರದು. ಕೊನೆಗೆ ಈ ಊರಿಗೆ ಸ್ಕೂಲು ಯಾರು ಕಟ್ಟದ್ರು ಅಂದ್ರೆ 'ಬಲ್ಗಡೆ ಮನೆ, ಎಡ್ಗಡೆ ಮನೆ ಎಲ್ಡುವೆ ಒಂದು ಜಾಗುಕ್ಕೆ ಜಗ್ಳ ಆಡ್ತಿದ್ದು, ಆಗ ಈ ನಡ್ಲು ಮನೆ ಬಂದು ಸ್ಕೂಲು ಕಟ್ಸಿಬಿಟ್ರು' ಅಂತ ಎಸ್ರು ತಗಳಕೆ.

ಹೊಸ ಜನ: ಈಗ ಆಯ್ತಲ್ಲ ಬಿಡಿ, ನಿಮ್ಮ ಆ ಮೊದ್ಲಿನ ಜಾಗ್ದಲ್ಲಿ ಮೇಲ್ಗಡೆ ಭಾಗದಲ್ಲಿ ಶಿವ್ನಂಗೂ, ಕೆಳ್ಗಡೆ ಭಾಗ್ದಲ್ಲಿ ಮಾರಮ್ಮಂಗು ಗುಡಿ ಕಟ್ಸದು ಅಂತ ಆತಲ್ಲ. ಅಲ್ಲಿ ನಿಮ್ಜೊತೆ ನಡ್ಲು ಮನೇನು ಸೇರಿ ಪೂಜೆ ಅಂಚ್ಕಳದೂ ಅಂತಾನು ಆತಲ್ಲ. ಅಂಗಿದ್ದಾಗ ಈ ಮರ ಮತ್ತೆ ಅದುಕ್ಕೆ ಕಟ್ಸಿರ ಕಟ್ಟೆ ಯಾಕೆ ಅಂತ ನೀವೆ ನಿರ್ಧಾರಾನೂ ಮಾಡಿದಿರ, ಅದುಕ್ಕೆ ನಡ್ಲು ಮನೇನು ಒಪ್ಗೆ ಕೊಟ್ಟೀತೆ. ಈಗ ಈ ಪತ್ರಗಳ ಮೇಲೆ ನಡ್ಲು ಮನೆ ಎಬ್ಬೆಟ್ಟು ಒತ್ಬಿಟ್ರೆ ಈ ಮರ ಕಡ್ಸಾಕೆ ಕೆಲ್ಸದ ಆಳುಗಳ್ನ ಕರುಸ್ತೀವಿ. ಅಷ್ಟ್ರಲ್ಲಿ ಇಷ್ಟು ವರ್ಷ ಪೂಜೆ ಮಾಡಿರ ಮರ ಕಡುಸ್ದ ಇರದ್ಕೆ ಅದೇನ ತಪ್ಪೊಪ್ಗೆ ಪೂಜೆ ಮಾಡುಸ್ತೀವಿ ಅಂದ್ರಲ್ಲ, ಅದುನ್ನ ಮಾಡುಸ್ಬಿಡಿ. ಇನ್ನೊಂದ್ಸಾರಿ ಏಳ್ತೀವಿ, ಜಾಗ ನಡ್ಲು ಮನೇದೆ ಆದ್ರಿಂದ ಅದು ಒಪ್ಗೆ ಕೊಡ್ದೆ ನಾವೇನೂ ಮಾಡಂಗಿಲ್ಲ. ಅದು ಹೂಂ ಅಂದ್ರೇನೆ, ಈ ಮರ ಹೋಗಿ ಸ್ಕೂಲು ಬರುತ್ತೆ. ನಾವೂ ಅದ್ರ ಬೇರು-ಗೀರು ತೊಂದ್ರೆ ಕೊಡ್ದಂಗೆ ಕಟ್ಟಡ ಕಟ್ಬೇಕು. ಅದುಕ್ಕೆಲ್ಲ ಟೈಮೂ ಇಡಿಯುತ್ತೆ. ನೀವೆಲ್ಲ ಸೇರಿ ಇಲ್ಲಿನ ಪಂಚಾತ್ತಿಗೆ ಒತ್ತಡ ಆಕಿದ್ರೆ ಬೇಗ ನಿಮ್ಮ ಮಕ್ಳು ಸ್ಕೂಲಿಗೆ ಓಗಂಗೆ ಆಗುತ್ತೆ. ಏನು ನಡ್ಲು ಮನೆ ಒಪ್ಗೇನಾ?

ನಡ್ಲು ಮನೆ: ಊಂ! ಇನ್ನೇನು ಮಾಡದು? ಇಲ್ಲಿಗೆ ಈ ಮರದ ಕತೇನ ಮುಗ್ಸಿಬಿಡಿ, ಆದ್ರೆ ಸ್ಕೂಲಿಗೆ ಮಾತ್ರ ನಡ್ಲು ಮನೆ ಸ್ಕೂಲು ಅಂತಾನೆ ಎಸ್ರಿಡ್ಬೇಕು. ಯಾಕೇಳಿ, ಯಾಕೇಳಿ? ಇದು ನನ್ ಜಾಗ ನೆನ್ಪಿರ್ಲಿ. ●